ಪ್ರಧಾನ ಸಿವಿಲ್ ನ್ಯಾಯಾದೀಶರು, ಜೆ.ಎಮ್.ಎಫ್. ಸಿ-2 ರಾಯಚೂರು

**ಸಿ.ಸಿ.ನಂ.4320/2022**

**ಪಿ.ಡಬ್ಲ್ಯೂ:6**
**ಸಿ.ಡಬ್ಲ್ಯೂ:9**

ಸಾಕ್ಷಿದಾರರ ಹೆಸರು : ವೇಣುಗೋಪಾಲ್

ಗಂಡನ ಹೆಸರು : ಬಾಬುಲು

ವಯಸ್ಸು : 60 ವರ್ಷ

ಉದ್ಯೋಗ : ನಿವೃತ್ತ ಅಬಕಾರಿ ಉಪ ನೀರಿಕ್ಷಕರು

ವಾಸಸ್ಥಳ : ರಾಯಚೂರು

ಇಂದು ದಿನಾಂಕ 24-04-2023 ರಂದು ಸಾಕ್ಷಿಯ ವರಿಗೆ ಪ್ರಮಾಣ ವಚನವನ್ನು ಬೋಧಿಸಲಾಯಿತು.

**ಮುಖ್ಯ ವಿಚಾರಣೆ: ಮಾನ್ಯ ಸ.ಸ.ಅ. ರವರಿಂದ:**

ನಾನು ಫೆಬ್ರುವರಿ 2022 ರಿಂದ ಫೆಬ್ರುವರಿ 2023 ರವರಗೆ ನಾನು ಅಬಕಾರಿ ಇಲಾಖೆಯಲ್ಲಿ ಉಪ ನಿರೀಕ್ಷಕರು ಅಂತ ಕರ್ತವ್ಯ ನಿರ್ವಹಿಸಿರುತ್ತೇನೆ.

ಚಾಸ 1 ರವರಿಂದ ಪ್ರಕರಣದ ಕಡತವನ್ನು ಪಡೆದುಕೊಂಡು ತನಿಖೆಯನ್ನು ಮುಂದುವರೆಸಿರುತ್ತೇನೆ. ರಾಸಾಯನಿಕ ಪರೀಕ್ಷಾ ಇಲಾಖೆಗೆ ಅರ್ಜಿಯನ್ನು ಬರೆದು, ರಾಸಾಯನಿಕ ಪರೀಕ್ಷಾ ವರದಿಯನ್ನು ಪಡೆದುಕೊಂಡು ಕಡತಕ್ಕೆ ಅಳವಡಿಸಿ, ಚಾ.ಸ.7 ರವರ ಹೇಳಿಕೆಯನ್ನು ಪಡೆದುಕೊಂಡು ಕಡತಕ್ಕೆ ಅಳವಡಿಸಿ, ಮುಂದಿನ ತನಿಖೆಗಾಗಿ ಪ್ರಕರಣದ ಕಡತವನ್ನು ಚಾ.ಸ.10 ರವರಿಗೆ ಹಸ್ತಾಂತರಿಸಿರುತ್ತೇನೆ. ಸಾಕ್ಷಿಯು ರಾಸಾಯನಿಕ ಪರೀಕ್ಷೆಗಾಗಿ ಬರೆದ ಅರ್ಜಿ ಮತ್ತು ಸ್ವೀಕರಿಸಿದ ವರದಿಯನ್ನು ನೋಡಿಗುರುತಿಸಿದ್ದು ಅವುಗಳನ್ನು ನಿ.ಪಿ.4 ಮತ್ತು ನಿ.ಪಿ.5 ಎಂದು ಗುರುತಿಸಲಾಯಿತು. ಸಾಕ್ಷಿಯ ಸಹಿಯನ್ನು ನಿ.ಪಿ.4(ಎ) ಮತ್ತು ನಿ.ಪಿ. 5(ಎ) ಎಂದು ಗುರುತಿಸಲಾಯಿತು. ಸಾಕ್ಷಿಯು ನ್ಯಾಯಾಲಯದ ಮುಂದೆ ಇರುವ ಮುದ್ದೇಮಾಲುಗಳನ್ನು ನೋಡಿ ಅವುಗಳನ್ನು ಈಗಾಗಲೇ ಮು,ಮಾ 1 ಎಂದು ಗುರುತಿಸಲಾಗಿರುತ್ತದೆ. ನ್ಯಾಯಾಲಯದ ಮುಂದಿರುವ ಆರೋಪಿತರು ಈ ಪ್ರಕ್ರಣದ ಆರೋಪಿತರಾಗಿರುತ್ತಾರೆ.

**ಪಾಟೀ ಸವಾಲು: ಆರೋಪಿ ಪರ ಮಾನ್ಯ ವಕೀಲರಿಂದ:**

ಚಾ.ಸ.1 ನನ್ನ ಸಹ್ಯೋದ್ಯೋಗಿ ಎಂದರೆ ಸರಿ. ಜಪ್ತು ಪಡೆಸಿಕೊಂಡ ಮುದ್ದೇಮಾಲಿಗೂ ಆರೋಪಿತನಿಗೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ಸಾಕ್ಷಿದಾರರ

ಹೇಳಿಕೆಗಳನ್ನು ಪಡೆದುಕೊಂಡಿಲ್ಲ ಎಂದರೆ ಸರಿಯಲ್ಲ. ಅಂಕೆ ಸಂಖ್ಯೆಗೊಸ್ಕರ ಆರೋಪಿತರ ವಿರುದ್ದ ಸುಳ್ಳು ತನಿಖಾ ವರದಿಯನ್ನು ದಾಖಲಿಸಿದ್ದೇನೆ ಎಂದರೆ ಸರಿಯಲ್ಲ. ಚಾಸ 1 ರವರು ನನ್ನ ಸಹ್ಯೋದ್ಯೋಗಿ ಆಗಿದ್ದರಿಂದ ಅವರು ನೀಡಿದ ದೂರಿಗೆ ಅನುಕೂಲವಾಗಲೆಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ: ಇಲ್ಲ;**

(ಸಾಕ್ಷಿಯು ನೀಡಿದ ಸಾಕ್ಷವನ್ನು ಯಥಾವತ್ತಾಗಿ ನನ್ನ ಉಕ್ತ ಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)

**ಓ.ಹೇ.ಕೇ.ಸರಿ ಇದೆ.**

ಸಹಿ/-

ಜೆ.ಎಂ. ಎಫ್. ಸಿ.-2, ರಾಯಚೂರು

**ಮಧ್ಯಂತರ ಅರ್ಜಿಯ ಆದೇಶದ ಮೇರೆಗೆ ಮುಂದುವರೆದ ಮುಖ್ಯ ವಿಚಾರಣೆ ಮಾನ್ಯ ಸ.ಸ.ಅ. ರವರಿಂದ**

ಇಂದು ದಿ:24–04–2023 ಸಾಕ್ಷಿಯನ್ನು ಪುನ: ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆ: ಮಾನ್ಯ ಸ.ಸ.ಅ. ರವರಿಂದ:**

ರಾಸಾಯನಿಕ ಪರೀಕ್ಷೆಗೆ ಅರ್ಜಿಯನ್ನು ಬರೆದು ವರದಿಯನ್ನು ಸ್ವೀಕರಿಸಿ, ಕಡತಕ್ಕೆ ಅಳವಡಿಸಿಕೊಂಡು ಮಾನ್ಯ ನ್ಯಾಯಾಲಯಕ್ಕೆ ದೋಷಾರೊಪಣಪಟ್ಟಿಯನ್ನು ಸಲ್ಲಿಸಿರುತ್ತೇನೆ. ಸಾಕ್ಷಿಯು ರಾಸಾಯನಿ ಪರೀಕ್ಷೆಗೆ ಬರೆದ ಅರ್ಜಿ ಮತ್ತು ರಾಸಾಯನಿಕ ವರದಿಯನ್ನು ನೋಡಿ ಗುರುತಿಸಿದ್ದು ಅವುಗಳನ್ನು ನಿ.ಪಿ.7 ಮತ್ತು ನಿ.ಪಿ. 8 ಎಂದು ಸಾಕ್ಷಿಯ ಸಹಿಯನ್ನು ನಿ.ಪಿ.7(ಎ) ಮತ್ತು ನಿ.ಪಿ.8(ಎ) ಎಂದು ಗುರುತಿಸಲಾಯಿತು.

**ಮರು ವಿಚಾರಣೆ: ಇಲ್ಲ;**

(ಸಾಕ್ಷಿಯು ನೀಡಿರುವ ಸಾಕ್ಷವನ್ನು ಯಥಾವತ್ತಾಗಿ ನನ್ನ ಉಕ್ತ ಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)

**ಓ.ಹೇ.ಕೇ.ಸರಿ ಇದೆ.**

ಸಹಿ/–

ಜೆ.ಎಂ. ಎಫ್. ಸಿ.–2, ರಾಯಚೂರು

# ಪ್ರಧಾನ ಸಿವಿಲ್ ನ್ಯಾಯಾದೀಶರು, ಜೆ.ಎಮ್.ಎಫ್. ಸಿ–2 ರಾಯಚೂರು

**ಸಿ.ಸಿ.ನಂ. 4320/2022**

**ಪಿ.ಡಬ್ಲ್ಯೂಃ 5**
**ಸಿ.ಡಬ್ಲ್ಯೂಃ 2**

| | |
|---|---|
| ಸಾಕ್ಷಿದಾರರ ಹೆಸರು | ಃ ಚಂದ್ರಶೇಖರ್ |
| ತಂದೆಯ ಹೆಸರು | ಃ ಅಂಜಿನೆಯ್ಯ |
| ವಯಸ್ಸು | : 38 ವರ್ಷ |
| ಉದ್ಯೋಗ | ಃ ಕೂಲಿ ಕೆಲಸ |
| ವಾಸಸ್ಥಳ | : ರಾಯಚೂರು. |

ಇಂದು ದಿ:24–04–2023 ರಂದು ಸಾಕ್ಷಿಯನ್ನು ಪುನ: ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆ: ಮಾನ್ಯ ಸ.ಸ.ಅ. ರವರಿಂದ:**

ನನಗೆ ಚಾಸಾ 3 ರವರ ಪರಿಚಯವಿಲ್ಲ. ನನಗೆ ಆರೋಪಿತರು ಪರಿಚಯವಿಲ್ಲ. ಈಗ ಸಾಕ್ಷಿಗೆ ಪಂಚನಾಮೆಯನ್ನು ನೋಡಿ ಗುರುತಿಸಿದ್ದು, ಸದರಿ ದಾಖಲೆಯನ್ನು ಮತ್ತು ಅದರ ಮೇಲೆ ಇರುವ ತನ್ನ ಸಹಿಯನ್ನು ಗುರುತಿಸಿರುವುದರಿಂದ, ಸದರಿ ಪಂಚನಾಮೆಯನ್ನು ಈಗಾಗಲೇ ನಿ:ಪಿ–1 ಎಂದು ಮತ್ತು ಸಾಕ್ಷಿಯ ಸಹಿಯನ್ನು ನಿ:ಪಿ–1(ಸಿ) ಎಂದು ಗುರುತಿಸಲಾಯಿತು. ನಿ:ಪಿ–1 ಕ್ಕೆ ನಾನು ಪೋ.ಠಾ. ಯಲ್ಲಿ ಸಹಿ ಮಾಡಿರುತ್ತೇನೆ. ನನಗೆ ನಿ:ಪಿ–1 ರ ಒಳಾಂಶಗಳ ಬಗ್ಗೆ ಮಾಹಿತಿ ಇಲ್ಲ. ಪೊಲಿಸರು ನನ್ನ ಸಮಕ್ಷಮ ಯಾವುದೇ ಸ್ಥಳ ಮತ್ತು ಜಪ್ತಿ ಪಂಚನಾಮೆ ಮಾಡಿರುವುದಿಲ್ಲ.

**ಈ ಹಂತದಲ್ಲಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಸ.ಸ.ಅ ರವರು ಪ್ರಾರ್ಥಿಸುತ್ತಾರೆ. ಅನುಮತಿ ನೀಡಲಾಯಿತು.)**

**ಪಾಟೀ ಸವಾಲು: ಸ.ಸ.ಅ. ರವರಿಂದ:**

ದಿ: 17–10–2021 ರಂದು ಬೆಳಿಗ್ಗೆ 08–30 ರಿಂದ 10–30 ಗಂಟೆಯವರೆಗೆ ನನ್ನ ಮತ್ತು ಚಾಸಾ–3 ರವರ ಸಮಕ್ಷಮ ನಿ:ಪಿ–1 ರಂತೆ ಸ್ಥಳದ ಪಂಚನಾಮೆ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಆ ಕಾಲಕ್ಕೆ ಒಂದುಕೆಂಪು ಬಣ್ಣದ ಪ್ಲಾಸ್ಟಿಕ್ ಚೀಲದಲ್ಲಿ 1 ಕೆ.ಜಿ. ಸಾಮಾರ್ಥ್ಯದ 16 ಪ್ಲಾಸ್ಟಿಕ್ ಕವರಗಳಲ್ಲಿ 16 ಕೆ.ಜಿ. ಸಿಹೆಚ್. ಪೌಡರ್ ಆರೋಪಿತರ ಕಡೆಯಿಂದ ನನ್ನ ಮತ್ತು ಚಾ.ಸ.3.ರವರ ಸಮಕ್ಷಮ ಪೊಲೀಸರು ಜಪ್ತಿ ಪಡಿಸಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ಜಪ್ತಿ

ಪಡಿಸಿಕೊಂಡ ವಸ್ತುಗಳಿಂದ 500 ಗ್ರಾಂ. ಸಿಹೆಚ್. ಪೌಡರ್ ರಾಸಾಯನಿಕ ಪರೀಕ್ಷೆಗಾಗಿ ಪ್ರತ್ಯೇಕವಾಗಿ ತೆಗೆದು ಮಹಜರು ಕ್ರಮ ಜರುಗಿಸಿರುತ್ತಾರೆ ಎಂದರೆ ಸರಿಯಲ್ಲ. ನಿ.ಪಿ.1 ರಲ್ಲಿರುವ ಎಲ್ಲ ಒಳಾಂಶಗಳು ಗೊತ್ತಿದ್ದರು ಆರೋಪಿತರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**<u>ಪಾಟೀ ಸವಾಲು: ಆರೋಪಿ ಪರ ವಕೀಲರಿಂದ:</u>**

ಪಾಟೀ ಸವಾಲು ಇಲ್ಲ ಎಂದು ಹೇಳುತ್ತಾರೆ.

**<u>ಮರು ವಿಚಾರಣೆ: ಇಲ್ಲ;</u>**

(ಸಾಕ್ಷಿಯು ನೀಡಿದ ಸಾಕ್ಷವನ್ನು ಯಥಾವತ್ತಾಗಿ ನನ್ನ ಉಕ್ತ ಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)

**ಓ.ಹೇ.ಕೇ.ಸರಿ ಇದೆ.**

ಸಹಿ/-

ಜೆ.ಎಂ.ಎಫ್.ಸಿ.2, ರಾಯಚೂರು